ದಿನಾಂಕಃ **03.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀಸವಾಲು**: 1** ರಿಂದ **3** ಮತ್ತು **5** ನೇ ಆರೋಪಿತರ ಪರ ವಕೀಲರಿಂದ</u>

33. ನಾನು ಈ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ ಆರೋಪಿತರ ಚಹರೆಗೆ ಸಂಬಂಧಪಟ್ಟಂತೆ ನಾನು ಪಿರ್ಯಾದುದಾರರ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನಾನು ಹೊನ್ನಾಳಿ ಪೋಲೀಸ್ ಠಾಣೆ ಪೋಲೀಸರಿಂದ ಪಡೆದುಕೊಂಡಿರುವ ಒಂದು ಟಿವಿ, ಒಂದು ಎಮರ್ಜೆನ್ಸಿ ಲೈಟ್, ಎರಡು ಇಂಡಕ್ಷನ್ ಸ್ಟವ್ ಮತ್ತು ಒಂದು ಕಂಪ್ಯೂಟರ್ ಸೆಟ್ಟಿಗೆ ಸಂಬಂಧಪಟ್ಟಂತೆ ಪಿರ್ಯಾದುದಾರರು ನನ್ನ ಮುಂದೆ ಮರು ಹೇಳಿಕೆಯನ್ನು ನೀಡಿದ್ದಾರೆ. ಈ ಮೇಲೆ ಹೇಳಿರುವ ವಸ್ತುಗಳಿಗೆ ಸಂಬಂಧಪಟ್ಟಂತೆ ನಾನು ಜಪ್ತಿ ಪಂಚನಾಮೆಯನ್ನು ದಿಃ 01.03.2016 ರಂದು ತಯಾರಿಸಿದ್ದೇನೆ.

34. ನಿಪಿ.2 ರ ಪಂಚನಾಮೆಯಲ್ಲಿ ನನ್ನ ಹಿಂದಿನ ತನಿಖಾಧಿಕಾರಿಗಳು ದರೋಡೆಯಾಗಿದೆ ಎಂದು ಹೇಳುವ ವಸ್ತುಗಳಿಗೂ ಮತ್ತು ನಾನು ನನ್ನ ಪಂಚನಾಮೆಯಲ್ಲಿ ನಮೂದು ಮಾಡಿರುವ ವಸ್ತುಗಳಿಗೂ ವ್ಯತ್ಯಾಸ ಇತ್ತು ಎಂದರೆ ಸಾಕ್ಷಿಯು ವ್ಯತ್ಯಾಸ ಇತ್ತು ಏಕೆಂದರೆ ಹಿಂದಿನ ತನಿಖಾಧಿಕಾರಿಗಳು ದರೋಡೆಯಾದ ಎಲ್ಲಾ ವಿವರಗಳನ್ನು ಪಂಚನಾಮೆಯಲ್ಲಿ ನಮೂದು ಮಾಡಿರಲಿಲ್ಲ ಮತ್ತು ಎಲ್ಲಾ ವಸ್ತುಗಳ ವಿವರಗಳನ್ನು ಪಿರ್ಯಾದುದಾರರು ಮರುಹೇಳಿಕೆಯಲ್ಲಿ ನನ್ನ ಮುಂದೆ ತಿಳಿಸಿದ್ದಾರೆ ಎಂದು ನುಡಿಯುತ್ತಾರೆ.

35. ಪೋಲೀಸರಿಗೆ ದೂರು ನೀಡುವ ಸಂದರ್ಭದಲ್ಲಿ ಎಲ್ಲಾ ವಸ್ತುಗಳ ವಿವರಗಳನ್ನು ಯಾಕೆ ತಿಳಿಸಿಲ್ಲ ಎಂದು ನಾನು ಪಿರ್ಯಾದುದಾರರನ್ನು ವಿಚಾರಿಸಿದಾಗ ಅವರ ಹೆಂಡತಿ ಬಂದ ನಂತರ ಬೇರೆ ವಸ್ತುಗಳ ವಿವರ ತನಗೆ ಗೊತ್ತಾಗಿದೆ ಎಂದು ಪಿರ್ಯಾದುದಾರರು ನನಗೆ ತಿಳಿಸಿದ್ದಾರೆ. ಘಟನೆ ನಡೆದಿದೆ ಎಂದು ಹೇಳುವ ಸಂದರ್ಬದಲ್ಲಿ ಪಿರ್ಯಾದುದಾರರ ಹೆಂಡತಿ ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ನಾನು ಪಿರ್ಯಾದುದಾರರ ಹೆಂಡತಿಯ ಹೇಳಿಕೆಯನ್ನು ಪಡೆದಿದ್ದೇನೆ. ನಾನು ಹೊನ್ನಾಳಿ ಪೋಲೀಸ್ ಠಾಣೆಯಿಂದ ಈ ಮೇಲೆ ಹೇಳಿದ ವಸ್ತುಗಳನ್ನು ಸ್ವೀಕರಿಸುವ ಪೂರ್ವದಲ್ಲಿ ಪಿರ್ಯಾದುದಾರರ ಹೆಂಡತಿಯ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಈ ಮೇಲೆ

ಹೇಳಿದ ವಸ್ತುಗಳ ಮಾಲಿಕತ್ವಕ್ಕೆ ಸಂಬಂಧ ಪಟ್ಟಂತೆ ನಾನು ಪಿರ್ಯಾದುದಾರರಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲ.

36. ಈ ಮೇಲೆ ಹೇಳಿದ ವಸ್ತುಗಳ ಮಾಲಿಕತ್ವಕ್ಕೆ ಸಂಬಂಧ ಪಟ್ಟಂತೆ ದಾಖಲೆಗಳು ಇದೆಯೇ ಎಂದು ನಾನು ಪಿರ್ಯಾದುದಾರರನ್ನು ಕೇಳಿದ ಬಗ್ಗೆ ತನಿಖಾ ದಾಖಲೆಗಳಲ್ಲಿ ನಮೂದು ಇಲ್ಲ. ದರೋಡೆ ಮಾಡಿದ್ದಾರೆ ಎಂದು ಹೇಳುವ ವಸ್ತುಗಳ ವಿವರ ಅಂದರೆ ಕಂಪನಿಯ ಹೆಸರು, ಸೀರಿಯಲ್ ನಂಬರುಗಳನ್ನು ಪಂಚನಾಮೆಯಲ್ಲಿ ಮತ್ತು ಹೇಳಿಕೆಗಳಲ್ಲಿ ನಮೂದು ಮಾಡಿಲ್ಲ.

37. ನನ್ನ ಹಿಂದಿನ ತನಿಖಾಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಒಂದು ಕತ್ತಿಯನ್ನು ಮಾತ್ರ ವಶಪಡಿಸಿ ಕೊಂಡಿದ್ದಾರೆ. ಹಿಂದಿನ ತನಿಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೃತ್ಯಕ್ಕೆ ಸಂಬಂಧಪಟ್ಟಂತೆ ಸ್ಥಳದಲ್ಲಿ ಇದ್ದಂತಹ ವಸ್ತುಗಳ ಬಗ್ಗೆ ನಮೂದು ಮಾಡಿಲ್ಲ.

38. ಪಿರ್ಯಾದುದಾರರು ಘಟನೆ ನಡೆದ ತಕ್ಷಣ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರಿಂದ ನನ್ನ ಮುಂದೆ ಹಾಜರುಪಡಿಸಿದ್ದ ಬಟ್ಟೆಗಳನ್ನು ಹಿಂದಿನ ತನಿಖಾಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿದ್ದ ಸಂದರ್ಭದಲ್ಲಿ ಅವರ ಮುಂದೆ ಹಾಜರುಪಡಿಸಿರಲಿಲ್ಲ. ಹಿಂದಿನ ತನಿಖಾಧಿಕಾರಿಗಳು ಸ್ಥಳಕ್ಕೆ ಬೇಟಿ ನೀಡಿ ಸಂದರ್ಭದಲ್ಲಿ ಪಿರ್ಯಾದುದಾರರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೋ ಇಲ್ಲವೊ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಿಪಿ.2 ರ ಸ್ಥಳ ಪಂಚನಾಮೆಯನ್ನು ತಯಾರಿಸುವ ಸಂದರ್ಭದಲ್ಲಿ ಪಿರ್ಯಾದುದಾರರ ಸ್ಥಳದಲ್ಲಿ ಹಾಜರಿದ್ದರು ಎಂದು ನಿಪಿ.2 ರಲ್ಲಿ ನಮೂದು ಇದೆ ಎಂದರೆ ಸರಿ.

39. ಪಿರ್ಯಾದುದಾರರ ಮರು ಹೇಳಿಕೆಯನ್ನು ಪಡೆದುಕೊಂಡ ನಂತರ ನಾನು ಹೊನ್ನಾಳಿ ಪೋಲೀಸ್ ಠಾಣೆಯಿಂದ ಈ ಮೇಲೆ ಹೇಳಿದ ವಸ್ತುಗಳನ್ನು ಸ್ವೀಕರಿಸಿದ್ದೇನೆ ಎಂದರೆ ಸರಿಯಲ್ಲ.

40. 1 ರಿಂದ 5 ನೇ ಆರೋಪಿಗಳನ್ನು ದಾವಣಗೆರೆ ಜಿಲ್ಲಾ ಕಾರಾಗೃಹದಿಂದ ತಂದು ಹಾಜರುಪಡಿಸುವಂತೆ ನಾನು ನ.ರಾ.ಪುರ ಠಾಣೆಯ ಸಿಬ್ಬಂದಿಗಳಿಗೆ ಮೌಖಿಕವಾಗಿ ಸೂಚನೆ ನೀಡಿದ್ದೇನೆ. ಆರೋಪಿಗಳನ್ನು ದಾವಣಗೆರೆ ಜಿಲ್ಲಾ ಕಾರಾಗೃಹದಿಂದ ತಂದು ಹಾಜರುಪಡಿಸುವಂತೆ ಎ.ಎಸ್.ಐ. ಗುರುಶಾಂತಪ್ಪ, ಹೆಚ್.ಸಿ.35, ಪಿಸಿ-678, ಪಿಸಿ-93 ಮತ್ತು ಪಿಸಿ-423 ರವರನ್ನು ಜೊತೆಗೆ ಡಿ.ಆರ್.ಸಿಬ್ಬಂದಿಗಳನ್ನು ನಾನು ನೇಮಕ ಮಾಡಿದ್ದೇನೆ. ನಮ್ಮ ಕಚೇರಿಯ ಸಿಬ್ಬಂದಿಗಳ ಜೊತೆ ಡಿ.ಆರ್. ಸಿಬ್ಬಂದಿಗಳನ್ನು

ಕಳುಹಿಸಿಕೊಡುವ ಬಗ್ಗೆ ನಾನು ಡಿ.ಆರ್ ಕಚೇರಿಗೆ ಲಿಖಿತ ಪತ್ರ ಬರೆದಿದ್ದೇನೆ, ಸದರಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಯಾವ ದಿನಾಂಕದಂದು ಪತ್ರ ಬರೆದಿದ್ದೇನೆ ಎಂದು ಈಗ ನೆನಪಿಲ್ಲ. 1 ರಿಂದ 5 ನೇ ಆರೋಪಿಗಳನ್ನು ದಾವಣಗೆರೆ ಜಿಲ್ಲಾ ಕಾರಾಗೃಹದಿಂದ ಕರೆದುಕೊಂಡು ಬಂದು ನ.ರಾ.ಪುರ ಕಾರಾಗೃಹದಲ್ಲಿ ಇಡಲಾಗಿತ್ತು.

41. ಆರೋಪಿತರ ಗುರುತಿಸುವಿಕೆಯನ್ನು ಮರೆಮಾಚಲು ಅವರ ಮುಖಕ್ಕೆ ಕಪ್ಪು ಬಟ್ಟೆಯನ್ನು ಸುತ್ತಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನ್ಯಾಯಾಲಯದ ಕಡತದಲ್ಲಿ ದಾಖಲೆಗಳಿವೆ. 1 ರಿಂದ 5 ನೇ ಆರೋಪಿಗಳನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗುವ ಪೂರ್ವದಲ್ಲಿ ಅವರ ಗುರುತು ಹಚ್ಚುವ ಕವಾಯತನ್ನು ನಡೆಸಲಾಗಿದೆ.

42. ದಿಃ 16.11.2015 ರಂದು 1 ರಿಂದ 5 ನೇ ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿರುತ್ತೇನೆ. ಸಮಯವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಆರೋಪಿತರ ಗುರುತು ಹಚ್ಚುವ ಕವಾಯತನ್ನು ನಡೆಸುವ ಪೂರ್ವದಲ್ಲಿ ಅವರನ್ನು ಸಾರ್ವಜನಿಕರ ಮುಂದೆ ಪ್ರದರ್ಶಿಸ ಲಾಗಿತ್ತು ಎಂದರೆ ಸರಿಯಲ್ಲ. ಗುರುತು ಹಚ್ಚುವ ಕವಾಯತನ್ನು ನಡೆಸುವಂತೆ ನಾನು ತಹಸಿಲ್ದಾರರಿಗೆ ದಿಃ 16.11.2015 ರಂದು ಮನವಿ ಸಲ್ಲಿಸಿದ್ದು, ತಹಸಿಲ್ದಾರರು ಮರುದಿನ ಬಂದು ಗುರುತು ಹಚ್ಚುವ ಕವಾಯತನ್ನು ನಡೆಸುತ್ತೇನೆ ಎಂದು ಹೇಳಿದ್ದಾರೆ. ತಹಸಿಲ್ದಾರರು ಮರುದಿನ ಬಂದು ಗುರುತು ಹಚ್ಚುವ ಕವಾಯತನ್ನು ನಡೆಸುತ್ತೇನೆ ಎಂದು ನನಗೆ ಮೌಖಿಕವಾಗಿ ತಿಳಿಸಿದ್ದರು.

43. ತಹಸಿಲ್ದಾರರು ಗುರುತು ಹಚ್ಚುವ ಕವಾಯತನ್ನು ನಡೆಸುವ ಪೂರ್ವದಲ್ಲಿಯೇ ನಾನು ಆರೋಪಿತರನ್ನು ನ.ರಾ.ಪುರ ಸಾರ್ವಜನಿಕ ಮುಂದೆ ಅವರ ಗುರುತಿನ ಪ್ರದರ್ಶನವನ್ನು ಮಾಡಿರುವುದರಿಂದ ತಹಸಿಲ್ದಾರರು ನಡೆಸಿರುವ ಗುರುತು ಹಚ್ಚುವ ಕವಾಯತು ತನ್ನ ಪಾವಿತ್ರ್ಯತೆಯನ್ನು ಕಳೆದುಕೊಂಡಿದೆ ಎಂದರೆ ಸರಿಯಲ್ಲ. ಆರೋಪಿತರು ಸ್ವಇಚ್ಛಾ ಹೇಳಿಕೆ ನೀಡಿದ್ದಾರೆ ಎಂದು ಹೇಳಿದ ನಂತರ ನಾನು ಘಟನೆಗೆ ಸಂಬಂಧಪಟ್ಟಂತೆ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಆರೋಪಿತರು ನನ್ನ ಸಮಕ್ಷಮ ಯಾವುದೇ ಸ್ವಇಚ್ಛಾ ಹೇಳಿಕೆಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಘಟನೆಗೆ ಸಂಬಂಧಪಟ್ಟಂತೆ ಹೊನ್ನಾಳಿ ಪೋಲೀಸರ ಮುಂದೆ ನೀಡಿರುವ ಸ್ವಇಚ್ಛಾ ಹೇಳಿಕೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ.

44. ತನಿಖಾ ಕಾಲದಲ್ಲಿ ನಾನು ಕತ್ತಿ ಮತ್ತು ಲಾಂಗನ್ನು ವಶಪಡಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದಿಃ 24.03.2016 ರಂದು ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಆರ್.ಟಿ.ಸಿ.ಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿ ಕೊಂಡಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

45. ಕೃತ್ಯ ನಡೆದಿದೆ ಎಂದು ಹೇಳುವ ಸ್ಥಳವು ವಾಸದ ಮನೆಯಾಗಿತ್ತು ಎಂದರೆ ಸರಿ. ಕೃತ್ಯ ನಡೆದಿದೆ ಎಂದು ಹೇಳುವ ವಾಸದ ಮನೆಗೆ ಸಂಬಂಧಪಟ್ಟಂತೆ ಯಾವುದೇ ಅಸೆಸ್ ಮೆಂಟ್ ರಿಜಿಸ್ಟರ್ ಇರುವುದಿಲ್ಲ ಎಂದು ಪಂಚಾಯತಿಯಿಂದ ದೃಢೀಕರಣ ಪಡೆದು ಕೊಂಡಿದ್ದೇನೆ. ಮನೆಗೆ ಸಂಬಂಧಪಟ್ಟ ಅಸೆಸ್ ಮೆಂಟ್ ರಿಜಿಸ್ಟರ್ ನ್ನು ಪಡೆದುಕೊಳ್ಳಲು ನಾನು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ವಾಸದ ಮನೆಗೆ ಸಂಬಂಧಪಟ್ಟಂತೆ ಪಂಚಾಯತಿ ದಾಖಲೆಗಳನ್ನು ಯಾಕೆ ಪಡೆದು ಕೊಂಡಿಲ್ಲ ಎಂದು ನಾನು ಪಿರ್ಯಾದುದಾರರನ್ನು ವಿಚಾರಣೆ ಮಾಡಿಲ್ಲ.

46. ಕೃತ್ಯ ನಡೆದಿದೆ ಎಂದು ಹೇಳುವ ಸಂದರ್ಭದಲ್ಲಿ ವಾಸದ ಮನೆಗೆ ವಿದ್ಯುತ್ ಸಂಪರ್ಕ ಇತ್ತೊ ಅಥವ ಇಲ್ಲವೊ ಎಂದು ಈಗ ಹೇಳಲು ಆಗುವುದಿಲ್ಲ. ಮನೆಯಲ್ಲಿ ಬೆಳಕಿನ ಸೌಕರ್ಯ ಇದ್ದ ಬಗ್ಗೆ ನನಗೆ ಈಗ ಹೇಳಲು ಆಗುವುದಿಲ್ಲ. ಆರೋಪಿಗಳನ್ನು ತಡರಾತ್ರಿಯಲ್ಲಿ ನೀವು ಯಾವ ರೀತಿ ಗುರುತಿಸಿದ್ದೀರಿ ಎಂದು ಪಿರ್ಯಾದುದಾರರನ್ನು ವಿಚಾರಿಸಿದ್ದೀರ ಎನ್ನುವ ಪ್ರಶ್ನೆಗೆ ಸಾಕ್ಷಿಯು 1 ನೇ ಆರೋಪಿಯು ಸ್ಥಳೀಯ ನಾಗಿದ್ದ ಎಂದು ಪಿರ್ಯಾದುದಾರರು ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. ಪಿರ್ಯಾದುದಾರರು ತನ್ನ ಹೇಳಿಕೆಯಲ್ಲಿ ನನಗೆ ಸದರಿ ವಿಷಯವನುನ ತಿಳಿಸಿದ್ದಾರೆ. ಪಿರ್ಯಾದುದಾರರು ನನ್ನ ಬಳಿ 1 ನೇ ಆರೋಪಿಯು ಸ್ಥಳೀಯನಾಗಿದ್ದ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ.

47. ವಶಪಡಿಸಿಕೊಂಡಿದ್ದ ಮುದ್ದೆಮಾಲುಗಳನ್ನು ಪಿರ್ಯಾದಿಗೆ ನ್ಯಾಯಾಲಯದ ಆದೇಶದಂತೆ ಹಿಂತಿರುಗಿಸಿದ ಬಗ್ಗೆ ಫೋಟೋ ತೆಗೆದಿಲ್ಲ, ಪಿ.ಎಫ್ ಮೇಲೆ ಸಹಿಗಳನ್ನು ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ದರೋಡೆಯಾಗಿದೆ ಎಂದು ಹೇಳುವ ವಸ್ತುಗಳಿಗೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ.

48. ನಾನು ಪಡೆದುಕೊಂಡಿರುವ ಗಾಯದ ಪ್ರಮಾಣಪತ್ರದಲ್ಲಿ ಪಿರ್ಯಾದುದಾರರು ಯಾವ ವ್ಯಕ್ತಿಯಿಂದ ಹಲ್ಲೆಗೊಳಗಾಗಿದ್ದಾರೆ ಎಂದು ನಮೂದು

ಇಲ್ಲ ಎಂದರೆ ಸರಿ. ಆಸ್ಪತ್ರೆಗೆ ಹೋದ ಸಂದರ್ಭದಲ್ಲಿ ನಿಮಗೆ ಹಲ್ಲೆ ಮಾಡಿದ ವ್ಯಕ್ತಿಯ ವಿವರವನ್ನು ವೈದ್ಯರಿಗೆ ಯಾಕೆ ಹೇಳಿಲ್ಲ ಎನ್ನುವುದನ್ನು ನಾನು ಮರುಹೇಳಿಕೆ ಪಡೆಯುವ ಸಂದರ್ಭದಲ್ಲಿ ಪಿರ್ಯಾದುದಾರರನ್ನು ವಿಚಾರಿಸಿಲ್ಲ.

49. ನಾನು ಕೇವಲ ಯಾಂತ್ರಿಕವಾಗಿ ತನಿಖೆ ಮಾಡಿ ಪ್ರಕರಣಕ್ಕೆ ಸಂಬಂಧಪಡದೇ ಇರುವ ಅಮಾಯಕರ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ.3 ರಿಂದ 28, 30, 31 ರಲ್ಲಿ ಹೇಳಿದ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 4 ನೇ ಆರೋಪಿ ಪರ ವಕೀಲರಿಂದ

(4 ನೇ ಆರೋಪಿ ಪರ ವಕೀಲರು 1 ರಿಂದ 3 ಮತ್ತು 5 ನೇ ಆರೋಪಿ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು 4 ನೇ ಆರೋಪಿ ಪರ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ)

ಪಾಟೀ ಸವಾಲುಃ 6 ನೇ ಆರೋಪಿ ಪರ ವಕೀಲರಿಂದ

50. 6 ನೇ ಆರೋಪಿ ಮತ್ತು ಅವರ ವಾಹನಕ್ಕೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಕೂಡ ಉದ್ದೇಶಪೂರ್ವಕವಾಗಿ 6 ನೇ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

Sd/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ